MADAM SPEAKER: Motion moved:

"In the Rules of Procedure and Conduct of Business in the Mysore Legislative Assembly for the word "Mysore" wherever it occurs, the word 'Karnataka' shall be substituted."

SRI S. M. KRISHNA: The motion is self explanatory

MADAM SPEAKER: I will put the motion to the vote of the House.

The question is:

"In the Rules of Procedure and Conduct of Business in the Mysore Legislative Assembly for the word "Mysore" wherever it occurs, the word Karnataka' shall be substituted."

The motion was unanimously adopted.

CLASHES AT THE MANASAGANGOTHRI MYSORE.

ಶ್ರೀ ಕಾಗೋಡು ತಿಮ್ಮಪ್ಪ: (ಸಾಗರ)—ರೂಲ್ಸ್ ಪ್ರಕಾರ ನಾನು ನಿನ್ನೆ ಒಂದು ಸೂಚನೆಯನ್ನು ಕಳುಹಿಸಿದ್ದೇನೆ. ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿಯಲ್ಲಿ ದಿನಾಂಕ 20, 21, 22ರಂದು ಅಲ್ಲಿನ ಪ್ರಾಧ್ಯಾಪಕರಲ್ಲಿ ಒಂದು ಹಲ್ಲೆ ನಡೆಸಿದೆ. ವಿದ್ಯಾರ್ಥಿಗಳ ಮೇಲೂ ಒಂದು ಹಲ್ಲೆ ನಡೆದಿದೆ. ಆದರಿಂದ ಈಗಾಗಲೇ ಎರಡು ಕಡೆಯವರೂ ಒಂದು ರೀತಿ ಪಣತೊಟ್ಟಿದ್ದಾರೆ. ಇದು ಸಣ್ಣ ವಿಷಯವಲ್ಲ. ಇದರಿಂದ ಮುಂದೆ ಹೆಚ್ಚು ವಿಕೋಪಕ್ಕೆ ಹೋಗುವ ಪರಿಸ್ಥಿತಿ ಉದ್ಭವವಾಗುತ್ತಿದೆ. ಆದ್ದರಿಂದ ಅದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆಯೆಂಬುದನ್ನು ಈ ಸಭೆಗೆ ತಿಳಿಸಬೇಕು.

ಅಧ್ಯಕ್ಷರು.—ನಾನು ತಮ್ಮ ಕಾಗದವನ್ನು ನೋಡಿದ್ದೇನೆ. ಈ ವಿಚಾರದ ಬಗ್ಗೆ ಆದಷ್ಟು ಜಾಗ್ರತೆಯಾಗಿ ವರದಿಯನ್ನು ತರಿಸುತ್ತೇನೆ. ಈ ವಿಚಾರದಲ್ಲಿ ತಾವು ಇವತ್ತು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವಾಗ ಎಫೆಕ್ಟಿವ್ ಆಗಿ ಮಾತನಾಡುವುದಕ್ಕೆ ಅವಕಾಶವಿದೆ.